ಕಾರುಬಾರು ನಮ್ಮದು. ಮೈಸೂರಿನಿಂದ ದುರ್ಗದ ಬಸ್ಸು ಹತ್ತಿ ಕೂತರೆ ಎಂಟು ಗಂಟೆ ಪ್ರಯಾಣ, ಕಿಟಕಿ ಪಕ್ಕದ ಸೀಟಿಗೆ ಭಾರೀ ಗುದ್ದಾಟ, ಹೇಗೋ ಸೀಟು ಗಿಟ್ಟಿಸಿ ಕೂತರೆ... ರಸ್ತೆ ಬದಿಯ ಮರ ಎಣಿಸುತ್ತಾ ಯಾವಾಗ ದುರ್ಗ ಮುಟ್ಟೇವ್ರೋ ಎಂದು ಕಾಲು ಗಂಟೆಗೊಮ್ಮೆ 'ಅಪ್ಪಾ! ಇನ್ನೂ ಎಷ್ಟು ದೂರಾ?' ಅಂತಾ ಒಂದ್ಹತ್ತು ಸಾರಿ ಕೇಳಿ ಅಪ್ಪನ ಹತ್ತಿರ ಬೈಸಿಕೊಳ್ತಾ ಇದ್ದದ್ದು ಇನ್ನೂ ಮರ್ತಿಲ್ಲ. ದುರ್ಗ ತಲುಪಿ ಮತ್ತೊಂದು ಬಸ್ಸು ಹತ್ತಿ ಹಳ್ಳಿ ಕಡೆ ಹೋಗ್ಬೇಕಿತ್ತು. ಹಳ್ಳಿ ಬಸ್‌ಸ್ಟ್ಯಾಂಡಿನಲ್ಲಿ ಇಳೀತಿದ್ದ ಹಾಗೆ, ಯಾರಾದ್ರೂ ಸಿಕ್ಕೋರು ಗೊತ್ತಿರೋವ್ರು. 'ಹೇ ರುದ್ರಣ್ಣ ಯಾವಾಗ ಬಂದೆ? ಬ್ಯಾಗ್ ತತಾ ಇಲ್ಲಿ, ಶೀಲಕ್ಕಾ, ಕೋಕಿ, ಶಿವು... ಎಲ್ಲಾ ಪಾಡದಿರೇನಪ' ಅಂತಾ ಕೇಳ್ತಾ ಕೇಳ್ತಾ ಕಡಿಮೆ ಅಂದ್ರೆ ಒಂದು ನಾಲ್ಕು ಮಂದೀನಾದ್ರೂ ಸುತ್ತುವರೀತಿದ್ರು. ಅವರೆಲ್ಲಾ ನಮ್ಮ ಲಗೇಜು ಹೊತ್ಕೊಂಡು ಹೋಗ್ತಿದ್ರೆ, ಮಧ್ಯದಲ್ಲಿ ಸಾಗೋದು ಮೈಸೂರಿನವರ ಮೆರವಣಿಗೆ ದಾರಿಯುದ್ದಕ್ಕೂ... ದಸರಾ ಅಂಬಾರಿ ಮೇಲೆ ಕೂತಷ್ಟು ಜಂಬ ಪಡ್ತಿದ್ವಿ. ಅದೆಷ್ಟು ಅದ್ದೂರಿಯ, ಪ್ರೀತಿಯ ಸ್ವಾಗತ ಸಿಕ್ತಾ ಇತ್ತು.

ಕಾಫೀ ಪುಡಿ ತಿಪ್ಪೇಸ್ವಾಮಿಯ ಅಂಗಡಿ, ಅಂಗಡಿ ಅಲ್ಲ, ಗುಡಿಸಲು ಅನ್ನಿ. ಖಾರ ಮಂಡಕ್ಕಿ, ಮೆಣಸಿನಕಾಯಿ ವಾಸನೆ ಘಮ್ಮೆಂದು ಬರುತ್ತಿತ್ತು. ಈ ಸುವಾಸನೆಯನ್ನು ಮೀರಿ ಬರುತ್ತಿದ್ದುದು ಗುಡಿಸಲು ಮುಂದಿನ ಕಡು ಕಪ್ಪನೆಯ ಚರಂಡಿಯ ಗಬ್ಬು ನಾತ... ಹಾಗೇ ಮೂಗು ಮುಚ್ಚಿಕೊಂಡು ಚರಂಡಿ ದಾಟಿದ್ರೆ... ಮಾವನ ಮನೆ ಓಣಿ, ಅಲ್ಲಿಯೂ ಅದೇ ಪ್ರೀತಿಯ ಸ್ವಾಗತ, ಅಜ್ಜಿ-ಅಜ್ಜನ ಅಪ್ಪುಗೆ... ಪಾನಕ ಸೇವನೆ ಇದಾದ ನಂತರ ನಾನು ನನ್ನ ತಮ್ಮ ಓಡ್ತಿದ್ವಿ ದೊಡ್ಡಪ್ಪನ ಮನೆಗೆ... ಇಲ್ಲಿಯ ಸ್ವಾಗತ ಇನ್ನೂ ಅದ್ದೂರಿಯಾಗಿರುತ್ತಿತ್ತು. ಅಷ್ಟೇ ಆಪ್ಯಾಯಮಾನವಾಗಿರ್ತಿತ್ತು, ಮುದ್ದು ಮುಖದ, ದಢೂತಿ ದೇಹದ ಚಂದ್ರಮ್ಮ ದೊಡ್ಡಮ್ಮ ನಗ್ತಾ ಬರ್ತಿದ್ರೆ... ಅಂಬಾರಿ ಹೊತ್ತ ಆನೆ ಬಂದ್ಹಾಗೆ ಆಗ್ತಿತ್ತು. ಅಲ್ಲೇ ಪಕ್ಕದಲ್ಲಿ ಕಪ್ಪನೆ ಪಾರಿ ನಗ್ತಾ ಬರ್‍ತಿ... ಬರ್ತಿ... ಅಂದ್ರೆ ಸ್ವರ್ಗದ ಬಾಗಿಲು ತೆಗೆದ ಹಾಗೆ ಭಾಸವಾಗುತ್ತಿತ್ತು. ನನಗೂ ಪಾರೀಗೂ ಒಂದು ಹತ್ತು ವರ್ಷ ಅಂತರವಿರಬಹುದು. ನನಗೆ ಅವಳೆಂದರೆ ಭಾರೀ ಪ್ರೀತಿ, ಅವಳಿಗೂ ಅಷ್ಟೇ. ಅವಳು ಮಾಡೋ ಆ ಕಪ್ಪನೆ ಬೆಲ್ಲದ ಕಾಫೀ ಅದೆಷ್ಟು ರುಚಿಯಾಗಿರ್ತಿತ್ತು. ಈ ಪಾರಿ ನಮ್ಮ ದೊಡ್ಡಮ್ಮನ ಎಡಗೈ, ಬಲಗೈ, ಅಡಿಗೆ ಆಳು, ಮನೆ ಸಂಭಾಳ್ಸೋಳು... ಎಲ್ಲಾ... ಆಲ್ ಇನ್ ಒನ್ ತರಹ. ಇದೆಲ್ಲಾ ಯಾಕೆ ಅಂದ್ರೆ... ನಮ್ಮ ದೊಡ್ಡಮ್ಮನ ಭಾರೀ ಗಾತ್ರ ಮತ್ತು ಅದರಿಂದಲೇ ರೂಢಿಯಾದ ಆಲಸ್ಯ... ಸೋಂಬೇರಿ. ಬೆಳಗ್ಗೆ ಎದ್ದು ಕಾಫೀ ಕುಡಿದು ಹೊರಟ್ರೆ ಪೇಟೆ ಬೀದೀಲಿ ನಮ್ಮ ದೊಡ್ಡಮ್ಮನದು ಒಂದು ತೆರನಾದ ಅದ್ದೂರಿಯ ಶಯನೋತ್ಸವ. ವಡೆ ಅಂಗಡಿ ಭೀಮಣ್ಣನ ಮಾತಾಡ್ಸಿ... ಹುಬ್ಬಳ್ಳಿ ಶಿವಣ್ಣನ ಗೇಲಿ ಮಾಡಿ... ಗೋವಿಂದ ಶೆಟ್ರು ಅಂಗಡಿನಲ್ಲಿ ಎಲೆ ಅಡಿಕೆ ಸುಣ್ಣ ತಗಂಡು ಸೋಟೆನಲ್ಲಿ ಇಟ್ಕೊಂಡು ಗೊಳಸಂಗಿ ಶಿವಮ್ಮನ ಮನೆ ಕೊಟ್ಟಿಗೇನಲ್ಲಿ ಮಾತಿಗೆ ಕೂತ್ರು ಆಂದ್ರೆ ಮುಗೀತು... ಹಳ್ಳಿಯ ಅರವತ್ತು ಮನೆ ಸುದ್ದೀನ್ನೂ ಎಲೆ ಅಡಿಕೆ ಜಗದಂಗೆ ಜಗದೂ ಜಗದೂ ಸವಿದೂ, ಉಗಿದೂ ತದನಂತರ ತಿಂಡಿ- ಕಾಫೀ ಎಲ್ಲಾ ಮುಗಿಸಿ ಮನೆ ಸೇರ್ತಾ ಇದ್ದದ್ದು ಮಧ್ಯಾಹ್ನ ಊಟದ ಹೊತ್ತಿಗೇನೆ. ಮಕ್ಕಳಿಲ್ಲದ ನಮ್ಮ ದೊಡ್ಡಪ್ಪ, ದೊಡ್ಡಮ್ಮನಿಗೆ ನಾವಂದ್ರೆ ಬಲು ಪ್ರೀತಿ. ಅವ್ರ ಮನೇಲಿ ಸರಿಯಾಗಿ ಮೂರು ಹೊತ್ತು ಒಲೆ ಉರೀತಾ ಇದ್ದದ್ದು ನಾವು ರಜಾಕ್ಕೆ ಹೋದಾಗ ಮಾತ್ರ. ತುಪ್ಪದಲ್ಲೇ ಅಡುಗೆ ಮಾಡಿ ಪ್ರೀತಿಯಿಂದ ಉಣ್ಣಿಸುತ್ತಾ, ಕಥೆ ಹೇಳ್ತಾ ಇದ್ದ ಪಾರಿಯ ಅಕ್ಕರೆ, ಸಕ್ಕರೆ ಸವಿದಷ್ಟೆ ಇಷ್ಟವಾಗುತಿತ್ತು. ಅವಳ ಜೊತೆ ದಿನವೂ ಏನಾದರೂ ಹೊಸ ಸಾಹಸ, ಹೊಸ ಕಥೆ, ಹೊಸ ಅನುಭವ ನಮಗಾಗಿಯೇ ತಯಾರಾಗಿರುತ್ತಿತ್ತು. ಬುತ್ತಿ ಕಟ್ಟಿಕೊಂಡು ತೋಟಕ್ಕೆ ಹೋಗಿದ್ದಾಗ ಹಾವು ಕಂಡದ್ದು, ಪಾರಿ ಅದನ್ನ ಹೊಡೆದು ಸಾಯಿಸಿದ್ದು... ಪಕ್ಕದ ಮಾವಿನ ತೋಪಿಗೆ ನುಗ್ಗಿ, ಮಾವಿನ ಕಾಯಿ ಕದ್ದದ್ದು ಮಾಲೀಕ ಅಟ್ಟಿಸಿಕೊಂಡು ಬಂದಾಗ ನಾನು ಎಡವಿ ಬಿದ್ದು ಮೊಣಕಾಲು ಮೊಣಕೈ ಗಾಯವಾದದ್ದು... ರಕ್ತ ಸುರಿದದ್ದು... ಪಾರಿ ಅಲ್ಲೇ ಯಾವುದೋ ಎಲೆಗಳನ್ನ ತಿಕ್ಕಿ ರಸ ಸವರಿದ್ದು... ಮನೆಯಲ್ಲಿ ಯಾರಿಗೂ ಹೇಳಬಾರದೆಂದು ಕರಾರು ಮಾಡಿಕೊಂಡದ್ದು... ಒಂದೇ ಎರಡೇ? ಬಟ್ಟೆ ತೊಳೆಯಲು ಕಾಲುವೆಗೆ ಹೋಗೋದು, ಮನೆಯವರು ಬೇಡಾ ಎಂದರೂ ಕದ್ದು ಮುಚ್ಚಿ ಪಾರಿ ಜೊತೆ ಹೋಗ್ತಾ ಇದ್ದದ್ದು ಬಲು ರೋಮಾಂಚಕಾರಿ. ಮೈಸೂರಿನ ಸುತ್ತ